
# ಜ್ಞಾನಶಕ್ತಿ
ಮಾಸ ಪತ್ರಿಕೆ

JNANASHAKTHI

ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003


ಸಂಪುಟ - 14 Reg. No. : KARBIL / 2005 / 16123 ಎಪ್ರಿಲ್ - 2025 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 04 ಪ್ರಕಟಣೆ : 29-04-2025


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ಪ್ರತಿಷ್ಠಿತ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ಸಹಾಯಹಸ್ತ

ಶ್ರೀಮತಿ ಪದ್ಮಾವತಿ ವಿಠಲ್ ರಾವ್ ಮತ್ತು ಶ್ರೀ ಬೆಳ್ಳೆ ವಿಠಲ್ ರಾವ್ ಇವರ ಸ್ಮರಣಾರ್ಥ ಶ್ರೀಮತಿ ಮಾಲಿನಿ ರವೀಂದ್ರನಾಥ್ ಮತ್ತು ಶ್ರೀ ಬೆಳ್ಳೆ ರವೀಂದ್ರನಾಥ್, ಶ್ರೀ ರಾಹುಲ್ ಬೆಳ್ಳೆ, ಮಾಸ್ಟರ್ ಮಿಲನ್ ಇವರು ₹ 5 ಲಕ್ಷ ದೇಣಿಗೆ ನೀಡಿ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ದಲ್ಲಿ ಒಂದು ಕೋಣೆಯನ್ನು ಪ್ರಾಯೋಜಿಸಿರುವರು. ಅವರು ಈ ಹಿಂದೆ ₹ 10 ಲಕ್ಷ ದೇಣಿಗೆ ನೀಡಿದ್ದು, ಒಟ್ಟು ಮೂರು ಕೋಣೆಯನ್ನು ಪ್ರಾಯೋಜಿಸಿದಂತಾಗಿದೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.






ಪಂಜ ಸರೋಜಿನಿ ಬಿ. ರಾವ್ ಮತ್ತು ಕೀರ್ತಿಶೇಷ ಶ್ರೀ ಪಂಜ ಭಾಸ್ಕರ್ ರಾವ್ ಇವರ ಸ್ಮರಣಾರ್ಥ ಅವರ ಪುತ್ರ ಶ್ರೀ ಪ್ರದೀಪ್ ಕುಮಾರ್ ಪಂಜ ₹ 2,50,000/-, ಪುತ್ರಿ ಶ್ರೀಮತಿ ಪಿ. ಸುಚಿತ್ರ ₹ 1,25,000/-, ಕು। ಪಿ. ಸುರೇಖಾ ₹ 1,25,000/- ಒಟ್ಟು ₹ 5,00,000/- (ರೂಪ್ಯಾ ಐದು ಲಕ್ಷ) ನೀಡಿ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ದಲ್ಲಿ ಒಂದು ಕೋಣೆಯನ್ನು ಪ್ರಾಯೋಜಿಸಿರುವರು. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ದುಬೈ ನಿವಾಸಿ ಶ್ರೀ ರಾಜಶೇಖರ್ ಶರ್ಮಾ ಇವರ ಧರ್ಮಪತ್ನಿ ಶ್ರೀಮತಿ ಅನುಪಮ ಶರ್ಮ ಇವರು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ₹ 50,000/- ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.




ಶ್ರೀ ರಾಜಶೇಖರ ರಾವ್ ಬೆಳ್ಳೆ ಹಾಗೂ ಪತ್ನಿ ಶ್ರೀಮತಿ ಅನುಪಮ ರಾವ್ ಬೆಳ್ಳೆ ಇವರ ಪುತ್ರ ಶ್ರೀ ಮಿಥಿಲ್ ರಾವ್ ಬೆಳ್ಳೆ ಇವರು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ₹ 50,000/- ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಸಮಾಜ ಬಾಂಧವರೇ,

ತಾ. 10-05-2025ನೇ ಶನಿವಾರ ಸಂಜೆ ಗಂಟೆ 5-30ರಿಂದ



ಶ್ರೀ ಸಭಾದ ವತಿಯಿಂದ

**'ಶ್ರೀ ಶಂಕರ ಜಯಂತಿ ಆಚರಣೆ'**

ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀ ಗುರುಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ವಿನಂತಿಸುತ್ತೇವೆ.

ಅಧ್ಯಕ್ಷರು ಮತ್ತು ಸರ್ವಸದಸ್ಯರು

ಹೆಚ್ಚಿನ ಮಾಹಿತಿಗಾಗಿ

ಶ್ರೀ ಜನಕರಾಜ್ ✆ : 8494939446 | ಶ್ರೀಮತಿ ಜಯಂತಿ ವಿನೋದ್ ✆ : 9945742680

### ಕಾರ್ಯಕ್ರಮಗಳು

ಸಂಜೆ 5-00ರಿಂದ 5-30 : ಉಪಾಹಾರ

ಸಂಜೆ 5-30ರಿಂದ : ಶ್ರೀ ದುರ್ಗಾನಮಸ್ಕಾರ ಪೂಜೆ

ಸೇವಾಕರ್ತರು :

ಡಾ। ಎ. ಪಿ. ಕೃಷ್ಣ ಮತ್ತು ಶ್ರೀಮತಿ ಸುಮನ ಕೃಷ್ಣ

ರಾತ್ರಿ 7-30ರಿಂದ : ಶ್ರೀ ಶಂಕರರ ಬಗ್ಗೆ ಉಪನ್ಯಾಸ
ಶ್ರೀ ಪ್ರವೀಣಚಂದ್ರ ಶರ್ಮ

ರಾತ್ರಿ 8-00ರಿಂದ : ಮಂಗಳಾರತಿ
ಪ್ರಸಾದ ಭೋಜನ

ವಿ. ಸೂ. : ಸದಸ್ಯರು ಅರ್ಚನೆಗಾಗಿ ಪುಷ್ಪ ಹಾಗೂ ಪತ್ರೆಗಳನ್ನು ತಂದು ಭಾಗವಹಿಸಬೇಕಾಗಿ ವಿನಂತಿ.

## ಜ್ಞಾನಶಕ್ತಿ ಮಾಸಪತ್ರಿಕೆ

ಪ್ರಧಾನ ಸಂಪಾದಕರು : ಎಂ. ಎಸ್. ರಘುನಾಥ ರಾವ್ ಪುತ್ತೂರು 9448481696

ಸಂಪಾದಕರು : ಪಿ. ಶ್ರೀಕಾಂತ್ ರಾವ್ 9343361618

ಸಂಪಾದಕ ಮಂಡಳಿ : • ನಾಗರಾಜ್ ವರ್ಕಾಡಿ

• ರಘುವೀರ್ ಪೆರ್ಡೂರು • ಟಿ. ಬಿ. ಮೋಹನ್ ರಾವ್ • ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :

• ಉದಯ ಕುಮಾರ್ ಪಿ. • ಸಂತೋಷ್ ಕುಮಾರ್ ಯು.

• ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು : • ಚೇತನ್ ಶರ್ಮ • ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು : ಡಾ. ಎ. ಪಿ. ಕೃಷ್ಣ

: 7795116598 : 9343361618 e-mail : jnanashakthisss@gmail.com

## ಪುತ್ತೂರಿನಲ್ಲಿ ಸುಸಜ್ಜಿತ 'ಶಿವಸದನ'

### ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯ

ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ 'ಶಿವಸದನ'ದಲ್ಲಿ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿ ನಿಲಯವಿದ್ದು, ಹಿರಿಯ ನಾಗರಿಕರ ವಸತಿನಿಲಯದಲ್ಲಿ 45ಕ್ಕೂ ಹೆಚ್ಚು ನಿವಾಸಿಗಳಿದ್ದು, ಇದೀಗ ವಿಕಲಚೇತನರ ವಿಶೇಷ ಶಾಲೆಗೆ (Day Care) ಮಕ್ಕಳ ದಾಖಲಾತಿ ಆರಂಭವಾಗಿದೆ. ನುರಿತ ಶಿಕ್ಷಕರಿಂದ ಇವರಿಗೆ ಹಲವಾರು ಚಟುವಟಿಕೆ, ಆಟ, ಪಾಠ, ಆರೈಕೆಗಳನ್ನು ಮಿತದರದಲ್ಲಿ ಒದಗಿಸಲಾಗುತ್ತಿದೆ. 25 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿನಿಲಯದಲ್ಲಿ ಉಳಕೊಳ್ಳಲು ಹಾಗೂ ಸಣ್ಣ ಮಕ್ಕಳಿಗೆ ಬೆಳಗ್ಗೆ 7–00ರಿಂದ ಸಂಜೆ 7–00ರ ವರೆಗೆ ನೋಡಿಕೊಳ್ಳುವ (Day Care) ವ್ಯವಸ್ಥೆ ಇದೆ. ಆವಶ್ಯಕತೆ ಇರುವವರಿಗೆ ಈ ಮಾಹಿತಿ ಹಂಚಿಕೊಳ್ಳಲು ವಿನಂತಿಸುತ್ತೇವೆ ಮತ್ತು ನಿಮ್ಮ ಎಲ್ಲಾ whatsapp ಗ್ರೂಪ್‌ಗಳಿಗೆ ಈ ಮಾಹಿತಿ ತಲುಪಿಸಲು ವಿನಂತಿ.

**ಹೆಚ್ಚಿನ ಮಾಹಿತಿ :** ಶ್ರೀ ಕರುಣ್ ರಾವ್ ಬೆಳ್ಳೆ – 7337634359
ಶ್ರೀಮತಿ ಸುಮಂಗಲಾ ಪ್ರಭಾಕರ್ – 9844242442
ಶ್ರೀ ಪಿ. ಶ್ರೀಕಾಂತ್ ರಾವ್ – 7795116598

ಪತ್ರಿಕೆಗೆ ಶುಭ ಬಯಸುವ–

**Dr. Jayalakshmi Devi**
**Dr. Jaganmohan, Smt. Asha Mohan**
**Akarsh M. Rao**
**Konchadi, Mangalore - 575 008**

*Manish Rao U.*
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001




## ಗೋಡೆಯೊಳುದಿಸಿದ ಗಣಪ – ನೃತ್ಯರೂಪಕ



ಮಧೂರು ಬ್ರಹ್ಮಕಲಶೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಶ್ರೀ ರಾಂ ಎಲ್ಲಂಗಳ ರಚಿಸಿ ನಿರ್ದೇಶಿಸಿದ ಗೋಡೆಯೊಳುದಿಸಿದ ಗಣಪ ಎಂಬ ನೃತ್ಯರೂಪಕವು ಮಂಗಳೂರು ಮೂಡುಶೆಡ್ಡೆಯ ಗೀತ ನರ್ತನ ತಂಡದಿಂದ ಪ್ರದರ್ಶಿಸಲ್ಪಟ್ಟಿತು. ಅದರ ನೆನಪಿಗಾಗಿ ಶ್ರೀ ಪ್ರತೀಕ್ ಎಲ್ಲಂಗಳ ರಚಿಸಿದ ವರ್ಣಚಿತ್ರವೊಂದನ್ನು ಶ್ರೀ ಕ್ಷೇತ್ರಕ್ಕೆ ಸಮರ್ಪಿಸಲಾಯಿತು.

## ಶುಭಾಶಯಗಳು



ಕರ್ನಾಟಕ ಗಮಕ ಕಲಾ ಪರಿಷತ್ ಮಾರ್ಚ್ ತಿಂಗಳಿನಲ್ಲಿ ನಡೆಸಿದ್ದ ಗಮಕ ಪ್ರಥಮ ಪರೀಕ್ಷೆಗೆ ಹಾಜರಾಗಿದ್ದ ಮೈಸೂರಿನ **ಪ್ರೊ. ಕೆ. ರಾಮಮೂರ್ತಿ ರಾವ್** ಇವರು 88% ಶ್ರೇಯಾಂಕ ಗಳಿಸಿ ಅತ್ಯುತ್ಕೃಷ್ಟ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ ಹಾಗೂ ಅವರ ಪತ್ನಿ **ಶ್ರೀಮತಿ ಲತಾ ರಾಮಮೂರ್ತಿ ರಾವ್** ಅವರೂ ಕೂಡಾ ಇದೇ ಪರೀಕ್ಷೆಗೆ ಹಾಜರಾಗಿದ್ದು 82% ಶ್ರೇಯಾಂಕ ಪಡೆದು ಅತ್ಯುತ್ಕೃಷ್ಟ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಅದೇರೀತಿ ಶ್ರೀಮತಿ ಲತಾರಾವ್ ಅವರು ಸಂಸ್ಕೃತ ಭಾರತಿ ಸಂಸ್ಥೆ ಇದುವರೆಗೆ ನಡೆಸಿದ (ಸಂಸ್ಕೃತ ಕೋವಿದ ಪರೀಕ್ಷೆ ಸೇರಿದಂತೆ) ಸಂಸ್ಕೃತದ ಏಳನೇ ಹಂತದ ಪರೀಕ್ಷೆಯಾದ ಸಂಸ್ಕೃತ ಗೀತಾ ಪ್ರವೇಶದಲ್ಲೂ ಶೇ. 86 ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುತ್ತಾರೆ. ಅವರಿಗೆ ಜ್ಞಾನಶಕ್ತಿ ಸಾಂಸ್ಕೃತಿಕ ಸಭಾದ ಪರವಾಗಿ ಅಭಿನಂದನೆಗಳು – ಶುಭಾಶಯಗಳು.

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

Prop. : SUDHAKAR BELLE
: 9845193103/ 9481563103
KARAN DIGITAL STUDIO
Sadasukh Building
Nr. Postoffice, Padubidri - 574 111
Opp. Busstand
Belman
All Marriage & Other functions
Photography & Videography Available

# ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ 75ನೇ ವರ್ಧಂತಿ ಮತ್ತು ಶ್ರೀ ರಾಮನವಮಿ ಕಾರ್ಯಕ್ರಮ



ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ, ಮಂಗಳೂರು ಇದರ ವತಿಯಿಂದ ತಾರೀಕು 6–04–2025ನೇ ಭಾನುವಾರ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ 75ನೇ ವರ್ಧಂತಿ ಮತ್ತು ಶ್ರೀರಾಮನವಮಿ ಕಾರ್ಯಕ್ರಮ ನಡೆಯಿತು. ವಿವಿಧ ಪಾರಾಯಣಗಳ ಬಳಿಕ ಗಾಯತ್ರೀಹೋಮ ಪ್ರಯುಕ್ತ ಗಾಯತ್ರೀ ಜಪಾನುಷ್ಠಾನ ಆರಂಭವಾಯಿತು. ಶ್ರೀ ಶಾರದಾಂಬ ಭಜನಾ ಮಂಡಳಿಯುವರ ಭಜನಾಸೇವೆ ಬಳಿಕ ಮಹಿಳೆಯರು ಶ್ರೀ ರಾಮರಕ್ಷಾ ಸ್ತೋತ್ರ, ಹನುಮ ಸ್ತೋತ್ರ, ಸರ್ವಮಂಗಲ ಮಾಂಗಲ್ಯೇ... ಸ್ತೋತ್ರ ಪಠಿಸಿದರು. ಗಾಯತ್ರೀ ಹೋಮದ ಕರ್ತೃಗಳಾಗಿ ಶ್ರೀ ಉದಯಕುಮಾರ್ ಮತ್ತು ಶ್ರೀಮತಿ ಭುವನೇಶ್ವರಿ ದಂಪತಿಗಳು ಭಾಗವಹಿಸಿದ್ದರು.











ಬಳಿಕ ಸಂಘದ ಯುವ ವೇದಿಕೆಯ ಅಧ್ಯಕ್ಷರಾದ ಶ್ರೀ ಜನಕರಾಜ ಮತ್ತು ಶ್ರೀಮತಿ ವಿದ್ಯಾಲಕ್ಷ್ಮೀ ದಂಪತಿಗಳು ಶ್ರೀರಾಮದೇವರಿಗೆ ಕಲಶಾಭಿಷೇಕ, ಕಲ್ಪೋಕ್ತಪೂಜೆ ಮತ್ತು ಅರ್ಚನೆಗಳನ್ನು ಪೂಜಾಕರ್ತೃ ಗಳಾಗಿ ನೆರವೇರಿಸಿದರು. ನಂತರ ಶ್ರೀ ಸಂಜಯ್ ಕುಮಾರ್ ಫಲಿಮಾರ್ ಇವರು ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರ ಪರಮಪೂಜ್ಯ ಶಂಕರಾಚಾರ್ಯ ಅನಂತ ಶ್ರೀ ವಿಭೂಷಿತ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪೂರ್ವಾಶ್ರಮದ ಬಗ್ಗೆ ಬಹಳ ಸರಳವಾಗಿ ಎಲ್ಲರ ಮನಮುಟ್ಟುವಂತೆ ಮಾತನಾಡಿದರು. ಗಾಯತ್ರೀಹೋಮದ ಪೂರ್ಣಾಹುತಿ, ಮಹಾಪೂಜೆ ಬಳಿಕ ಪ್ರಸಾದ ವಿತರಣೆ ಮಾಡಲಾಯಿತು. ವೇದಮೂರ್ತಿ ಶ್ರೀ ಸುಬ್ರಹ್ಮಣ್ಯ ಭಟ್ ಮತ್ತು ಶ್ರೀ ಅರವಿಂದ ಶರ್ಮರ ನೇತೃತ್ವದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಡಾ। ಎ. ಪಿ. ಕೃಷ್ಣ ಮತ್ತು ಸಭಾದ ಪದಾಧಿಕಾರಿಗಳು, ಮಹಿಳಾ ವೇದಿಕೆ, ಯುವವೇದಿಕೆ ಪದಾಧಿಕಾರಿಗಳು, ಸದಸ್ಯರು, ಶಾಂಕರತತ್ವ ಅಭಿಯಾನದ ಸದಸ್ಯರು, ಗುರುಭಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕೃತಾರ್ಥರಾದರು. ಶ್ರೀ ರಘುವೀರ ರಾವ್ ಪೆರ್ಡೂರು ಅವರು ಕಾರ್ಯಕ್ರಮದ ಭಾವಚಿತ್ರಗಳನ್ನು ತೆಗೆದು ಸಹಕರಿಸಿದರು. ಕೊನೆಯಲ್ಲಿ ಗುರುಭಕ್ತರೆಲ್ಲರೂ ಪ್ರಸಾದಭೋಜನ ಸ್ವೀಕರಿಸಿ ತೃಪ್ತರಾದರು.

*ವರದಿ : ಶುಭ ರವಿಕಿರಣ್, ಮಂಗಳೂರು*

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.)

**'ಶ್ರೀ ಕುಡ್ವಿ ಪದ್ಮನಾಭಯ್ಯ ಗಾರ್ಡನ್ಸ್' ಬಿಜೈ ರಸ್ತೆ, ಮಂಗಳೂರು - 575 003**

**ಶಾಖೆಗಳು** ✆ : **9880968032 / 0824-2982095**

ಮಂಗಳೂರು : ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ
✆ : 0824 - 2491895 / 8861155454
ಪುತ್ತೂರು : ವಾಣಿಜ್ಯ ಸಂಕೀರ್ಣ ಒಂದನೇ ಮಹಡಿ, ತಾಲೂಕು ಕಚೇರಿ ರಸ್ತೆ
✆ : 08251 - 235895 / 8123659955
ಬೆಳ್ತಂಗಡಿ : 'ಬೃಂದಾವನ', ಸಂತೆಕಟ್ಟೆ (ಬಸ್‌ಸ್ಟಾಂಡ್ ಎದುರು)
✆ : 08256 - 234076 / 8867269944
ಸುರತ್ಕಲ್ : 'ಪೂವ ಆರ್ಕೇಡ್' ✆ : 0824 - 2477895 / 9611550803
ಕಾರ್ಕಳ : 'ಶ್ರೀ ಶಂಕರ', ಪ್ರಸಾದ್ ಭವನ ಕಂಪೌಂಡು
ಅನಂತಶಯನ ದೇವಸ್ಥಾನದ ಹತ್ತಿರ, ತೆಳ್ಳಾರ್ ರೋಡ್
✆ : 08258 - 235544 / 9980528800
ಸುಳ್ಯ : ಶ್ರೀ ಗಣೇಶ ವಾಣಿಜ್ಯ ಸಂಕೀರ್ಣ, ಹಳೇ ಬಸ್‌ಸ್ಟಾಂಡ್ ಎದುರು
✆ : 08257 - 233895 / 8147539955
ಬಿ.ಸಿ. ರೋಡ್ : ಲಕ್ಷ್ಮೀ ಮಹಲ್ ✆ : 08255 - 233895 / 8792464344
ವಿಟ್ಲ : ಅಪ್ಪಾಜಿ ರಾವ್ ಕಾಂಪ್ಲೆಕ್ಸ್, ಖಾಸಗಿ ಬಸ್‌ನಿಲ್ದಾಣದ ಬಳಿ
✆ : 08255 - 239895 / 8147469955
ಮೂಡಬಿದ್ರೆ : ವಾಸುದೇವ ಕಾಂಪ್ಲೆಕ್ಸ್, ಯೂನಿಯನ್ ಬ್ಯಾಂಕ್ ಮೇಲುಗಡೆ
✆ : 08258 - 200161 / 8147549955
ಪದವಿನಂಗಡಿ : ಶ್ರೀ ವೆಂಕಟರಮಣ ದೇವಸ್ಥಾನದ ಹಿಂಭಾಗ
✆ : 9731405917
ಕುತ್ತಾರ್ : ಹಸನ್ ಎನ್‌ಕ್ಲೇವ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ ಬಳಿ
✆ : 8792034344
ಕಿನ್ನಿಗೋಳಿ : ಡೈಮಂಡ್ ಆರ್ಕೇಡ್ ಕಟ್ಟಡ, ಕಿನ್ನಿಗೋಳಿ ಬಸ್‌ಸ್ಟಾಂಡ್ ಹತ್ತಿರ
✆ : 8197677575
ಪಡೀಲ್ ಪುತ್ತೂರು : ವಿಜಯಲಕ್ಷ್ಮೀ ಕಾಂಪ್ಲೆಕ್ಸ್ ✆ : 9740775967
ಕೊಕ್ರಾಡಿ : ವೃದ್ಧಿ ಕಾಂಪ್ಲೆಕ್ಸ್, ಜಂತಿಗೋಳಿ ಕ್ರಾಸ್, ಬೆಳ್ತಂಗಡಿ
✆ : 9741443470
ಕುಂಜತ್‌ಬೈಲ್ : ನಮ್ರದೀಪ್ ಕಾಂಪ್ಲೆಕ್ಸ್, ಕೋಸ್ಟಲ್ ಗಾರ್ಡ್ ಎದುರು
✆ : 9740925733
ಕೋಡಿಕ್ಕಲ್ : ಸುಗಂಧಿ ಪರ್ಲ್ಸ್, ಮೈನ್ ರೋಡ್, 7th ಕ್ರಾಸ್, ಮಂಗಳೂರು
✆ : 9945916755

**ಆಕರ್ಷಕ ಪ್ರತಿಫಲದ ನಮ್ಮ ಠೇವಣಿ ಯೋಜನೆಗಳು**

| ನಿರಖು ಠೇವಣಿ (F.D.) | | |
|---|---|---|
| 45 ದಿನಗಳಿಂದ 180 ದಿನಗಳ ವರೆಗೆ | - | 5% |
| 181 ದಿನಗಳಿಂದ 364 ದಿನಗಳ ವರೆಗೆ | - | 6% |
| 1 ವರ್ಷದಿಂದ 3 ವರ್ಷದ ವರೆಗೆ | - | 8% |
| 3 ವರ್ಷಕ್ಕಿಂತ ಮೇಲ್ಪಟ್ಟು | - | 9% |
| ಹಿರಿಯ ನಾಗರಿಕರಿಗೆ, ಸಂಘ–ಸಂಸ್ಥೆಗಳಿಗೆ 0.5% ಹೆಚ್ಚುವರಿ ಬಡ್ಡಿ | | |

| ಶ್ರೀ ಸುಬ್ರಹ್ಮಣ್ಯ ನಗದು ಪತ್ರ (CASH CERTIFICATE) ANNUALISED | | |
|---|---|---|
| ಆವರ್ತನ ಖಾತೆ (RECURRING DEPOSIT) | - | 8% |
| ಉಳಿತಾಯ ಖಾತೆ (SAVINGS BANK) | - | 3% |
| ಮಧುಸಂಚಯ ಖಾತೆ (PIGMY DEPOSIT) | - | 3% |

**ಹೂಡಿಕೆಗಳು ದ್ವಿಗುಣಗೊಳ್ಳುವ ವಿಶೇಷ ನಿರಖು ಠೇವಣಿ ಯೋಜನೆ**

ಕನಿಷ್ಠ ಠೇವಣಿ : ರೂ. **10,000/-** ಠೇವಣಿ ಅವಧಿ : **88** ತಿಂಗಳು

ವಿಶೇಷ ಬಡ್ಡಿದರ : **9.6%**

ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು**
**ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ**
**ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ**

ಪತ್ರಿಕೆಗೆ ಶುಭ ಬಯಸುವ –

**ಇನ್ನ ಶ್ರೀನಿವಾಸ ರಾವ್** ಹಾಗೂ
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
ಮತ್ತು **ಕುಟುಂಬ**

ಶ್ರೀ ಗಣೇಶ ಕೃಪಾ, ಪೃಥ್ವೀ ಲೇಔಟ್, ಕೂಳೂರು, ಮಂಗಳೂರು - 575 013

# ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿನಿಲಯಕ್ಕೆ ದೇಣಿಗೆ



ಉಡುಪಿ ನಿವಾಸಿ ಕೀರ್ತಿಶೇಷ ಜಯರಾಮ ರಾವ್ ಅವರ ಜನ್ಮದಿನದ ನೆನಪಿಗಾಗಿ ಅವರ ಪತ್ನಿ ಶ್ರೀಮತಿ ವೀಣಾ ಜಯರಾಮ ರಾವ್ ಅವರು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 25,000/– ದೇಣಿಗೆ ನೀಡಿದ್ದಾರೆ. ಈ ಹಿಂದೆ ಶ್ರೀ ಜಯರಾಮ ರಾವ್ ಅವರು ಮತ್ತು ಅವರ ಸಹೋದರಿ ಶ್ರೀಮತಿ ರಾಜೇಶ್ವರಿ ಶುಭಕರ್ ಶಾನುಭೋಗರೊಂದಿಗೆ ಸೇರಿ ಶಿವಸದನಕ್ಕೆ ರೂಪ್ಯಾ ಒಂದು ಲಕ್ಷ ದೇಣಿಗೆ ನೀಡಿರುತ್ತಾರೆ. ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಮೈಸೂರು ನಿವಾಸಿ ಕೀರ್ತಿಶೇಷ ಚಂದ್ರಶೇಖರ ರಾವ್ ತಾಳೆಪ್ಪಾಡಿ ಇವರ ಧರ್ಮಪತ್ನಿ ಶ್ರೀಮತಿ ರಮಾವಾಣಿ ಬಿ. ಇವರು ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ಮತ್ತು ವಿಕಲಚೇತನರ ವಸತಿನಿಲಯ 'ಶಿವಸದನ'ಕ್ಕೆ ರೂ. 10,000/– ದೇಣಿಗೆ ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.



ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯಕ್ಕೆ ಒಂದು ಊಟದ ಟೇಬಲನ್ನು ಲೆಫ್ಟಿನೆಂಟ್ ಕರ್ನಲ್ ಶ್ರೀ ವರುಣ್ ರಾವ್, ಶ್ರೀಮತಿ ತೇಜಸ್ವಿನಿ ವರುಣ್ ರಾವ್ ಹಾಗೂ ಪುತ್ರ ಶ್ರೀ ವಿವಾನ್ ರಾವ್ ನೀಡಿರುವರು.

ಈ ಹಿಂದೆಯೂ ಪುತ್ತೂರಿನ ಶಿವಸದನಕ್ಕೆ ಅಗತ್ಯವಿದ್ದ ಏಣಿಯನ್ನು ನೀಡಿದ್ದರು. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

*ಛಾಯಾಚಿತ್ರ : ಶ್ರೀ ರಘುವೀರ್ ಪೆರ್ಡೂರು*



ಮಂಗಳೂರು ನಿವಾಸಿ ಶ್ರೀ ಶ್ರೀರಾಮ ಧ್ಯಾನಿ ಹಾಗೂ ಶ್ರೀಮತಿ ಶಾಂತ ರಾಮಧ್ಯಾನಿ ದಂಪತಿಗಳು ಪುತ್ತೂರಿನ ಹಿರಿಯ ನಾಗರಿಕರ ಹಾಗೂ ವಿಶೇಷ ಚೇತನರ ವಸತಿನಿಲಯಕ್ಕೆ ಒಂದು ಊಟದ ಟೇಬಲ್ ಅನ್ನು ನೀಡಿರುತ್ತಾರೆ. ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

# ಶ್ರೀಮತಿ ಸ್ನೇಹಲತಾ ದಿವಾಕರ್ ರಾವ್ ಇವರ 80ನೇ ಹುಟ್ಟುಹಬ್ಬ ಆಚರಣೆ



ಶ್ರೀಮತಿ ಸ್ನೇಹಲತಾ ದಿವಾಕರ್ ರಾವ್ ಅವರು ತನ್ನ 80ನೇ ಹುಟ್ಟುಹಬ್ಬವನ್ನು ಕುಟುಂಬದ ಸದಸ್ಯರು ಮತ್ತು ತನ್ನ ಹಿತೈಷಿಗಳೊಂದಿಗೆ ಪುತ್ತೂರಿನ 'ಶಿವಸದನ'ದಲ್ಲಿ ಆಚರಿಸಿದರು. ಅವರು ಸಾಂತೂರು ಡಾ। ದಿವಾಕರ್ ರಾವ್ ಇವರ ಧರ್ಮಪತ್ನಿ ಹಾಗೂ ಬೆಳ್ಳೆ ಶ್ರೀ ಭವಾನಿ ರಾವ್ ಮತ್ತು ಶ್ರೀಮತಿ ಶಾರದಾದೇವಿ ದಂಪತಿಗಳ ಪುತ್ರಿ. ಶ್ರೀಮತಿ ಅನುಪಮ ರಾಜಶೇಖರ್ ಮತ್ತು ಪುತ್ರ ಶ್ರೀ ಅಮರ್‌ದೀಪ್, ಸೊಸೆ ಶ್ರೀಮತಿ ತನುಜಾ, ಮೊಮ್ಮಕ್ಕಳು ಹೇಮಂತ್, ಅನನ್ಯ, ಅರ್ಪಿತ, ಸ್ನೇಹಾ ಹಾಗೂ ಸಹೋದರ, ಸಹೋದರಿಯರು ಮತ್ತು ಬಂಧು–ಬಾಂಧವರೊಂದಿಗೆ ಪುತ್ತೂರಿನ ಶಿವಸದನದಲ್ಲಿ ಅದ್ಧೂರಿಯಿಂದ ಆಚರಿಸಿದರು. ಶ್ರೀ ಶಾರದಾಂಬ ಭಜನಾ ಮಂಡಳಿ ಸದಸ್ಯರು, ಬೊಕ್ಕಸ, ಪುತ್ತೂರಿನ ಸದಸ್ಯರ ಭಜನಾ ಕಾರ್ಯಕ್ರಮದೊಂದಿಗೆ ಆರಂಭಗೊಂಡ ಈ ಕಾರ್ಯಕ್ರಮ, ಅಲಂಕೃತ ವಿವಿಧ ಬಣ್ಣಗಳ ಬಲೂನ್‌ಗಳಿಂದ ರಂಗೋಲಿಯಿಂದ ಅಂದವಾಗಿ ಸಿಂಗರಿಸಿದ ವೇದಿಕೆಗೆ, ಸಹೋದರರಾದ ಶ್ರೀ ರವೀಂದ್ರನಾಥ್ ಬೆಳ್ಳೆ ಸಹಿತ ಒಡಹುಟ್ಟಿದವರು ತಮ್ಮ ಪ್ರೀತಿಯ ಸಹೋದರಿಯನ್ನು ವೇದಿಕೆಗೆ ಕರೆತಂದರು. ಆರತಿ ಬೆಳಗಿ ಹುಟ್ಟುಹಬ್ಬದ ಶುಭಾಶಯ ಹಾಡನ್ನು ನಾದಿನಿಯವರೆಲ್ಲ ಹಾಡಿದರು. ಶ್ರೀ ಕರುಣ್ ಬೆಳ್ಳೆಯವರು ತಾವೇ ಸ್ವತಃ ತಯಾರಿಸಿದ ರಾಗಿ ಹಾಲುಬಾಯಿಯನ್ನು ಕತ್ತರಿಸುವಾಗ ಸಂಸ್ಕೃತದ ಹುಟ್ಟುಹಬ್ಬದ ಗೀತೆಯನ್ನು ಸದನದ ಸದಸ್ಯರು ಹಾಡಿದರು. ವಿಶೇಷಚೇತನ ಮಕ್ಕಳು, ಶಿಕ್ಷಕಿಯರು ಸಹ ಉತ್ತಮ ಕಾರ್ಯಕ್ರಮ ನೀಡಿದರು.

ತನ್ನ ಮನೆಯಲ್ಲಿ ನಡೆಯುವ ಪ್ರತಿಯೊಂದು ಸುಸಂದರ್ಭಗಳಲ್ಲಿ ಸುಬ್ರಹ್ಮಣ್ಯ ಸದನ ಮತ್ತು ಶಿವಸದನಕ್ಕೆ ದೇಣಿಗೆ ನೀಡುತ್ತಾ ಬಂದಿರುವ ಕೊಡುಗೈ ದಾನಿಯಾದ ಇವರ ಕುಟುಂಬ ಇಂದಿನ ಹುಟ್ಟುಹಬ್ಬದ ಸಂಭ್ರಮ ಪ್ರಯುಕ್ತ ಶ್ರೀ ಶಾರದಾಂಬ ಭಜನಾ ಮಂಡಳಿ, ಮಂಗಳೂರು ಇದರ ಭಜನಾ ಗುರುಗಳ ಅಪೇಕ್ಷೆಯಂತೆ ಒಂದು ಹಾರ್ಮೋನಿಯಂ ಕೊಡುಗೆ ನೀಡಿರುವರು. ಈ ಸಂದರ್ಭದಲ್ಲಿ ಅವರ ಮಗಳು ಶ್ರೀಮತಿ ಅನುಪಮ ರಾಜಶೇಖರ್ ಈ ದಿನದ ನೆನಪಿಗಾಗಿ ರೂ. 50,000/ವನ್ನು ಶಿವಸದನಕ್ಕೆ ದೇಣಿಗೆ ನೀಡಿದರು. ಶಿವಸದನದ ಹಿರಿಯರು, ಸದನದ ಸದಸ್ಯರು, ಇಲ್ಲಿನ ಸಿಬ್ಬಂದಿ ವರ್ಗ, ವಿಶೇಷಚೇತನ ಮಕ್ಕಳು, ಶಿಕ್ಷಕಿಯರು, ಟ್ರಸ್ಟ್‌ನ ಎಲ್ಲಾ ಪದಾಧಿಕಾರಿಗಳು, ಪುತ್ತೂರಿನ ಬಂಧುಗಳು, ಮುದರಂಗಡಿ, ನಂದಿಕೂರು, ಸಾಂತೂರು, ಎಲ್ಲಾ ಕುಟುಂಬಸ್ಥರು, ಸ್ನೇಹಾಲತರವರ ಬಂಧುಗಳು ಪ್ರೀತಿಯಿಂದ ಭಾಗವಹಿಸಿದ್ದರು. ಚಿಕ್ಕದಾಗಿ–ಚೊಕ್ಕದಾಗಿ ಎಲ್ಲಾ ಸಂದರ್ಭದ ಫೋಟೋಗಳನ್ನು ಒಂದುಗೂಡಿಸಿ ವಿಡಿಯೋ ಮಾಡಿದ ಡಾ। ಗಾನಳಿಗೆ ಧನ್ಯವಾದಗಳು. ಎಲ್ಲಾ ಕಾರ್ಯಕ್ರಮದ ಬಳಿಕ ವಿಶೇಷ ಭೋಜನವನ್ನು ಏರ್ಪಡಿಸಿದ್ದರು. ದೇವರು ಅವರಿಗೆ ಆರೋಗ್ಯ, ಆಯುಷ್ಯ ಹಾಗೂ ನೆಮ್ಮದಿ ನೀಡಲಿ, ಅವರು ದೀರ್ಘ ಸುಮಂಗಲಿಯಾಗಿ ಬಹುಕಾಲ ಬಾಳಲಿ ಎಂದು ನಮ್ಮೆಲ್ಲರ ಪ್ರೀತಿಯ ಹಾರೈಕೆ.

*ವರದಿ : ಶ್ರೀಮತಿ ಸುಮಂಗಲಾ ಪ್ರಭಾಕರ್*

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್** ಹಾಗೂ

**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**

ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ

ಕದ್ರಿ, ಮಂಗಳೂರು - 575 003

ಪತ್ರಿಕೆಗೆ ಶುಭ ಬಯಸುವ–

ಮೊಬೈಲ್ : 9972989678
9448104174

**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.

ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)

2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ

ಪುತ್ತೂರು ತಾಲೂಕು, ದ. ಕ., 574 241

# ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...



ಬಜೆ ದಿ। ಗೋವಿಂದ ರಾವ್ ಶಾನುಭಾಗ್ ಕೋರೆಂಗಾವ್ ಅವರ ಧರ್ಮಪತ್ನಿ **ಶ್ರೀಮತಿ ಶಾಂತಾ** (85) ಇವರು ತಾ. 29–3–2025ನೇ ಶನಿವಾರ ಬೆಂಗಳೂರಿನಲ್ಲಿ ದೈವಾಧೀನರಾದರು. ಇವರು ಮೂವರು ಪುತ್ರಿಯರನ್ನು ಅಗಲಿದ್ದಾರೆ.

●●●




**ಶ್ರೀಮತಿ ಶಾಂಭವಿ** (91) ದಿ। ಶೆಡ್ಡೆ ಭುಜಂಗ ರಾವ್ ಅವರ ಧರ್ಮಪತ್ನಿ ತಾ. 29–03–2025ನೇ ಶನಿವಾರ ನಿಧನರಾದರು. ಇವರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



ಪುತ್ತೂರಿನ ಬಪ್ಪಳಿಗೆ ಕರ್ಕುಂಜದಲ್ಲಿ ವಾಸವಾಗಿರುವ **ಶ್ರೀ ಕಮಲಾಕರ ಶ್ಯಾನುಭಾಗ್** (79) ಇವರು ತಾ. 24–03–2025ನೇ ಸೋಮವಾರ ವಿಧಿವಶರಾಗಿರುತ್ತಾರೆ. ಇವರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●




**ಶ್ರೀ ಗಣಪತಿ ಹೆಬ್ಬಾರ್** (82) ತಾ. 11–4–2025ನೇ ಶುಕ್ರವಾರ ತೆಂಕುಬೈಲು ಇಲ್ಲಿ ನಿಧನರಾದರು. ಅವರು ಮೂವರು ಮಕ್ಕಳನ್ನು ಅಗಲಿದ್ದಾರೆ.

●●●



ಪಚ್ಚನಾಡಿ ದಿ। ವಿಠಲ ಭಟ್ ಇವರ ಧರ್ಮಪತ್ನಿ **ಶ್ರೀಮತಿ ಶಾರದಮ್ಮ** (85) ತಾ. 3–4–2025ನೇ ಗುರುವಾರ ಮೈಸೂರು ಇಲ್ಲಿ ನಿಧನರಾದರು. ಇವರು ಓರ್ವ ಪುತ್ರ ಮತ್ತು ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

●●●



**ಶ್ರೀ ಬಜೆ ಎಸ್. ಗೋವಿಂದ ರಾವ್** (93) ತಾ. 2–4–2025 ಬುಧವಾರ ಬೆಂಗಳೂರಿನಲ್ಲಿ ನಿಧನರಾದರು.




**ಶ್ರೀ ನಿಶಿತ್ ಕುಮಾರ್** (62) ತಾ. 7–4–2025ನೇ ಸೋಮವಾರ ಉಡುಪಿಯಲ್ಲಿ ನಿಧನರಾದರು. ಅವರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

●●●



**ಶ್ರೀ ಪಿ. ಎಲ್. ಕೃಷ್ಣ ಶಾಸ್ತ್ರಿ** (91) ತಾ. 8–4–2025ನೇ ಮಂಗಳವಾರ ಮಂಗಳೂರಿನಲ್ಲಿ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿಯನ್ನು ಅಗಲಿದ್ದಾರೆ.

●●●



ಬೆಳಗಾವಿಯ **ಶ್ರೀ ಪ್ರತಾಪ್ ಧಾರೇಶ್ವರ** (82) ತಾ. 6–4–2025ನೇ ರವಿವಾರ ನಿಧನರಾದರು. ಅವರು ಪತ್ನಿ ಮತ್ತು ಪುತ್ರನನ್ನು ಅಗಲಿದ್ದಾರೆ.

●●●




ತಂತ್ರಾಡಿ ಮಧುಸೂದನ್ ಶಾನುಭೋಗ ಇವರ ಪತ್ನಿ **ಶ್ರೀಮತಿ ಸುಗುಣ** (52) ತಾ. 1–4–2025ನೇ ಮಂಗಳವಾರ ಧರ್ಮಸ್ಥಳದಲ್ಲಿ ನಿಧನರಾದರು. ಅವರು ಪತಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

●●●



**ಶ್ರೀಮತಿ ಲಲಿತಾ** (79) (ದಿ। ಕಿಗ್ಗಾ ನಾಗಭೂಷಣ ರಾವ್ ಅವರ ಧರ್ಮಪತ್ನಿ) ಇವರು ತಾ. 18–4–2025ನೇ ಶುಕ್ರವಾರ ನವಸಾರಿಯ ಗುಜರಾತ್‌ನಲ್ಲಿ ನಿಧನರಾದರು. ಅವರು ಓರ್ವ ಪುತ್ರನನ್ನು ಅಗಲಿದ್ದಾರೆ.

●●●




**ಶ್ರೀ ಜಿ. ಶ್ರೀಕಾಂತ ಹೆಬ್ಬಾರ್** (74) ಇವರು ತಾ. 21–4–2025ನೇ ಸೋಮವಾರ ಕುಂದಾಪುರದಲ್ಲಿ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿಯನ್ನು ಅಗಲಿದ್ದಾರೆ.

## ಮಧೂರು ದೇವಸ್ಥಾನದಲ್ಲಿ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ



ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಸ್ಥಾನದಲ್ಲಿ ನಡೆದ ಬ್ರಹ್ಮಕಲಶೋತ್ಸವ ಮತ್ತು ಮೂಡಪ್ಪ ಸೇವೆಯ ಸಂದರ್ಭದಲ್ಲಿ ಕಾಸರಗೋಡಿನ ವಿದುಷಿ ರಾಧಾ ಮುರಳೀಧರ ಮತ್ತು ಶ್ರೀಮತಿ ಶ್ವೇತಾ ನಾಗೇಶ್ ಚೆನ್ನೈ ಇವರು ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು. ಇವರಿಗೆ ಪಕ್ಕವಾದ್ಯ ವಯಲಿನ್‌ನಲ್ಲಿ ವಿದ್ವಾನ್ ವೇಣುಗೋಪಾಲ ಶ್ಯಾನುಭೋಗ್ ಮತ್ತು ಮೃದಂಗದಲ್ಲಿ ವಿದ್ವಾನ್ ನಿಕ್ಷಿತ್ ಪುತ್ತೂರು ಸಹಕರಿಸಿದರು.



## ಬ್ರಹ್ಮೋಪದೇಶ

ಶ್ರೀ ಸುಬ್ರಹ್ಮಣ್ಯ ಸಭಾದ ಮ್ಯಾನೇಜರ್ ಶ್ರೀ ರಾಘವೇಂದ್ರ ಮತ್ತು ಶ್ರೀಮತಿ ಅಶ್ವಿನಿ ಇವರ ಸುಪುತ್ರ **ಚಿ। ಸಮಂತ್**‌ನ ಬ್ರಹ್ಮೋಪದೇಶ ತಾ. 3–04–2025ನೇ ಗುರುವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾದ ಸಭಾಂಗಣ'ದಲ್ಲಿ ನಡೆಯಿತು.

❖❖❖

ಶ್ರೀಮತಿ ಚೈತನ್ಯಾ ಮತ್ತು ಶ್ರೀ ತಿಲಕ್ ರಾವ್ ಇವರ ಪುತ್ರ **ಚಿ। ಶಿಶಿರ್ ರಾವ್** ಇವನ ಬ್ರಹ್ಮೋಪದೇಶವು ತಾ. 2–03–2025ನೇ ರವಿವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾಸದನ'ದಲ್ಲಿ ನಡೆಯಿತು.

**PRAVEEN KUMAR ADYAPADY**
**NOTARY & ADVOCATE**
**MANGALORE OFFICE** JANVI PLAZA, IInd FLOOR BUNTS HOSTEL, MANGALORE
**BAJPE OFFICE** OZANAM COMPLEX, IInd FLOOR CHURCH BUILDING, MAIN ROAD, BAJPE
0824 - 2254478 (O) 9620392584, 9448724981(M), 2254448 (R)
**We undertakes : Civil, Criminal, Motor Vehicles, A.C., D.C. Cases, Land Conversion, Registration etc.**

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**


**PRAMOD AUTOMOBILES**
30 Years of Service
KARANGALPADY MANGALORE- 575 003
Ph. : 2493633 (O) 2212723 (R) M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

**PREETHIKA AUTOMOBILES**
2493633 9845851573
*Wholesale & Retail Dealers in :*
*2 & 3 WHEELERS, SPARES & ACCESSORIES*
**KARANGALPADY, MANGALORE - 575 003**
*Dealers in :*
Minda Switches, M. K. Products, Swiss Auto Products, Power Coils

# ಅಪಾರಕೀರ್ತಿ ಗಳಿಸಿ



ಮಾಂತ್ರಾಡಿ ಶ್ರೀ ರವೀಂದ್ರ ರಘುರಾಮ ರಾವ್ ಮತ್ತು ಶ್ರೀಮತಿ ವಾಣಿಶ್ರೀ ಇವರ ಪುತ್ರಿ **ಕು। ಸಮೀಕ್ಷಾ ರಾವ್** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ 99% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.

— — —



ಶ್ರೀ ಕಿಶೋರ್ ಕೆ. ಮತ್ತು ಶ್ರೀಮತಿ ಚಂದ್ರಿಕಾ ಇವರ ಪುತ್ರಿ **ಕು। ಶ್ರುತಿ** ಈ ಬಾರಿಯ ಪಿ.ಯು.ಸಿ.ಯಲ್ಲಿ 97.83% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.

— — —




ಶ್ರೀ ಆದರ್ಶ ರಾವ್ ಮತ್ತು ಶ್ರೀಮತಿ ಜಯರವರ ಪುತ್ರ **ಶ್ರೀ ಅಭಿನವ ರಾವ್** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ 97.5% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ.

— — —



ಮಾಂತ್ರಾಡಿ ಶ್ರೀ ರವೀಂದ್ರ ರಘುರಾಮ ರಾವ್ ಮತ್ತು ಶ್ರೀಮತಿ ವಾಣಿಶ್ರೀ ಇವರ ಪುತ್ರಿ **ಕು। ಪ್ರತೀಕ್ಷಾ ರಾವ್** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ 97.3% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.

— — —



ಬೆಂಗಳೂರಿನ ಶ್ರೀ ಅರವಿಂದ ಮತ್ತು ಡಾ. ಶ್ರೀವಿದ್ಯಾ ಇವರ ಪುತ್ರಿ **ಕು। ಸದೃಶ** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ 97% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.

— — —



ಉಜಿರೆಯ ಶ್ರೀ ರವೀಂದ್ರ ಕೆ. ಮತ್ತು ಶ್ರೀಮತಿ ಮಮತಾ ಇವರ ಪುತ್ರಿ **ಕು। ಕ್ಷಮಾ** ಈ ಬಾರಿಯ ಪಿ.ಯು.ಸಿ. ವಾಣಿಜ್ಯ ವಿಭಾಗದಲ್ಲಿ 93% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.

— — —



ಎಲ್ಲೂರಿನ ಶ್ರೀ ವೈ. ಸೀತಾರಾಮ ರಾವ್ ಮತ್ತು ಶ್ರೀಮತಿ ಪುಷ್ಪಾ ದಂಪತಿಗಳ ಪುತ್ರ **ಚಿ। ಕಾರ್ತಿಕೇಯ** ಇವನು ಈ ಸಾಲಿನ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ ಶೇ. 88.5 ಅಂಕಗಳನ್ನು ಪಡೆದು ವಿಶಿಷ್ಟ ಶ್ರೇಣಿಯನ್ನು ಗಳಿಸಿದ್ದಾನೆ. ಎಸ್.ವಿ.ಹೆಚ್. ಪದವಿಪೂರ್ವ ಕಾಲೇಜು, ಇನ್ನಂಜೆಯ ವಿದ್ಯಾರ್ಥಿ.



ಉಚ್ಚಿಲದ ಶ್ರೀ ಗಣೇಶ್ ರಾವ್ ಮತ್ತು ಶ್ರೀಮತಿ ವಾಣಿ ಇವರ ಪುತ್ರಿ **ಕು। ದಿವ್ಯಲಕ್ಷ್ಮೀ** ಇವಳು ಈ ವರ್ಷದ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಶೇ. 98.33 ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಇವಳು ಕಾಪು ದಂಡತೀರ್ಥ ವಿದ್ಯಾಸಂಸ್ಥೆಯ ವಿದ್ಯಾರ್ಥಿನಿ.

— — —



**ಕುಮಾರಿ ಅಮೂಲ್ಯ** (ಶ್ರೀಮತಿ ರಾಜೇಶ್ವರಿ ಮತ್ತು ಶ್ರೀ ಹೈದಂಗೂರು ಶ್ರೀಧರ ರಾವ್ ಸುಳ್ಯ) ಇವರ ಮಗಳು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 97.5 ಶೇಕಡಾ ಅಂಕ ಪಡೆದು ರಾಜ್ಯಕ್ಕೆ 14ನೇ ರ್‍ಯಾಂಕ್ ಪಡೆದಿದ್ದಾಳೆ.

— — —



ಶ್ರೀ ಗುರುಪ್ರಸಾದ್ ಎಚ್. ಎಲ್. ಮತ್ತು ಶ್ರೀಮತಿ ವಿನಯ ಹಾಸನ ಇವರ ಪುತ್ರ **ಶ್ರೀ ಅದ್ವಿತ್** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ 97.3% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾನೆ.

— — —



ಬೆಂಗಳೂರಿನ ಶ್ರೀ ಶ್ರೀವತ್ಸ ಮತ್ತು ಶ್ರೀಮತಿ ಮಧುರಾ ಇವರ ಪುತ್ರಿ **ಕು। ಅನುಷಾ** ಈ ಬಾರಿಯ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ 96.66% ಅಂಕಗಳಿಸಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾಳೆ.

— — —



ಮುಂಡ್ಕೂರು ಕೋರಿಕೆಬೆಟ್ಟಿನ ದಿ। ನಾಗಭೂಷಣ ಶಾಸ್ತ್ರಿ ಮತ್ತು ಶ್ರೀಮತಿ ಅನ್ನಪೂರ್ಣ ದಂಪತಿಗಳ ಪುತ್ರಿ **ಕು। ಕೆ. ಎನ್. ಅಂಬಿಕಾ** ಇವಳು ಈ ಸಾಲಿನ ಪಿ.ಯು.ಸಿ. ವಿಜ್ಞಾನ ವಿಭಾಗದಲ್ಲಿ 92.6% ಅಂಕಗಳನ್ನು ಪಡೆದು ವಿಶಿಷ್ಟ ಶ್ರೇಣಿಯನ್ನು ಗಳಿಸಿದ್ದಾಳೆ. ಡಾ। ಎನ್.ಎಸ್.ಎ.ಎಂ. ಪದವಿಪೂರ್ವ ಕಾಲೇಜು, ನಿಟ್ಟೆ, ಕಾರ್ಕಳ, ಉಡುಪಿ ಇದರ ವಿದ್ಯಾರ್ಥಿನಿ.



**ಡಾ। ಅನಘಾ** ಇವರು ಕರ್ನಾಟಕ ಮೆಡಿಕಲ್ ಕೌನ್ಸಿಲ್‌ನಿಂದ ಜನರಲ್ ಮೆಡಿಸಿನ್‌ನಲ್ಲಿ ಎಂ.ಡಿ. ಪದವಿಯನ್ನು ಪಡೆದಿದ್ದಾರೆ. ಅವರು ಎಂ.ಡಿ.ಯನ್ನು ಹುಬ್ಬಳ್ಳಿಯ ಕಿಮ್ಸ್ ಕಾಲೇಜಿನಲ್ಲಿ ಪಡೆದಿದ್ದು, ಇದೀಗ ಅದೇ ಕಾಲೇಜಿನಲ್ಲಿ ಸೀನಿಯರ್ ರೆಸಿಡೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ದಿ। ಎನ್. ಎಸ್. ಪ್ರಶಾಂತ್ ಮತ್ತು ಶ್ರೀಮತಿ ಅನಿತಾ ಇವರ ಪುತ್ರಿ.

## 'ಮಧೂರು ಕ್ಷೇತ್ರ ಮಹಾತ್ಮೆ' ಯಕ್ಷಗಾನ ಸಿ.ಡಿ. ಬಿಡುಗಡೆ



ಮಧೂರು ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಶ್ರೀ ರಾಂ ಎಲ್ಲಂಗಳ ವಿರಚಿತ 'ಮಧೂರು ಕ್ಷೇತ್ರ ಮಹಾತ್ಮೆ' ಯಕ್ಷಗಾನ ಪ್ರಸಂಗ ಬಿಡುಗಡೆಗೊಂಡಿತು. ಖ್ಯಾತ ಭಾಗವತ ಸಿರಿಬಾಗಿಲು ರಾಮಕೃಷ್ಣ ಮಯ್ಯರ ಸಾರಥ್ಯದಲ್ಲಿ ಪ್ರಸಂಗ ಪ್ರದರ್ಶನಗೊಂಡಿತು. ಈ ಸಂದರ್ಭದಲ್ಲಿ ಅರ್ಚಕ ಪಾತ್ರನಿರ್ವಹಿಸಿದ ಪ್ರಸಂಗಕರ್ತ ರಾಂ ಎಲ್ಲಂಗಳ ಅವರನ್ನು ಸಿರಿಬಾಗಿಲು ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದಲೂ ಬ್ರಹ್ಮಕಲಶೋತ್ಸವದ ಸಾಂಸ್ಕೃತಿಕ ಸಮಿತಿಯ ವತಿಯಿಂದಲೂ ಗೌರವಿಸಲಾಯಿತು.

NAVADURGA FINANCIALS
Estd 1998
SCAN ME TO KNOW MORE!!!

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216



Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
SHIVA ELECTRICALS
2nd Floor, Ozanam Complex, Church Building
Main Road, BAJPE, MANGALORE
We undertake all types of Electrical, Plumbing and Sanitary works




## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು ಹಾಗೂ
## ಶಾಂಕರ ತತ್ವಪ್ರಸಾರ ಅಭಿಯಾನ, ಮಂಗಳೂರು
## ಹಾಗೂ ವಿವಿಧ ಸಮಾಜ ಮತ್ತು
## ಸಂಘ-ಸಂಸ್ಥೆಗಳ ಸಹಯೋಗದಲ್ಲಿ

# 'ಶ್ರೀ ಶಂಕರಾಚಾರ್ಯರ ಜಯಂತಿ' ಆಚರಣೆ

ಸ್ವಸ್ತಿ। ಶ್ರೀ ವಿಶ್ವಾವಸು ನಾಮ ಸಂವತ್ಸರದ ಮೇಷ ಮಾಸ ೨೮ ಸಲುವ,

ದಿನಾಂಕ **11-05-2025**ನೇ ರವಿವಾರ

**'ಶ್ರೀ ಶಂಕರಾಚಾರ್ಯರ ಜಯಂತಿ'ಯನ್ನು**



ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಆಚರಿಸಲಾಗುವುದು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಅಪೇಕ್ಷೆ.

**ಅಧ್ಯಕ್ಷರು ಮತ್ತು ಸರ್ವಸದಸ್ಯರು**

### ಕಾರ್ಯಕ್ರಮಗಳು

| | |
|---|---|
| ಬೆಳಗ್ಗೆ ಗಂಟೆ 7-30ರಿಂದ 8-00 : | ವಿವಿಧ ಪಾರಾಯಣಗಳು ಮತ್ತು ಉಪಾಹಾರ |
| ಬೆಳಗ್ಗೆ ಗಂಟೆ 8-30ರಿಂದ : | **ಪ್ರಾರ್ಥನೆ ಮತ್ತು ಗಣಹೋಮ** |
| ಪ್ರಾಯೋಜಕರು : | ಶ್ರೀ ಸಂಜಯ ಕಾರಂತ್ ದಂಪತಿಗಳು |
| | **ಶ್ರೀ ಸತ್ಯನಾರಾಯಣ ಪೂಜಾ ಸಂಕಲ್ಪ** |
| ಪ್ರಾಯೋಜಕರು : | ಶ್ರೀ ವರದರಾಜ ನಾಗ್ವೇಕರ್ |
| ಬೆಳಗ್ಗೆ ಗಂಟೆ 9-00ರಿಂದ 10-30 : | **ಭಜನೆ** |
| | ಶ್ರೀ ಶಾರದಾಂಬ ಭಜನಾ ಮಂಡಳಿ ಸುಬ್ರಹ್ಮಣ್ಯ ಸದನ |
| ಬೆಳಗ್ಗೆ ಗಂಟೆ 10-30ರಿಂದ : | **ರುದ್ರ ಪಾರಾಯಣ ಮತ್ತು ರುದ್ರಾಭಿಷೇಕ** |
| ಬೆಳಗ್ಗೆ ಗಂಟೆ 11-30ರಿಂದ : | **ಬಾಲಶಂಕರ ವೇಷ ಸ್ಪರ್ಧೆ** (15 ವರ್ಷದ ಒಳಗಿನ ಮಕ್ಕಳಿಗೆ) |
| ಮಧ್ಯಾಹ್ನ ಗಂಟೆ 12-30ರಿಂದ : | **ಶ್ರೀ ಸತ್ಯನಾರಾಯಣ ಪೂಜೆ, ಮಂಗಳಾರತಿ** |
| ಮಧ್ಯಾಹ್ನ ಗಂಟೆ 12-45ರಿಂದ : | **ಪ್ರಸಾದ ವಿತರಣೆ, ಭೋಜನ** |
| ಮಧ್ಯಾಹ್ನ ಗಂಟೆ 2-00ರಿಂದ : | ಶ್ರೀ ಶಂಕರಾಚಾರ್ಯರ ಬಗ್ಗೆ ರೂಪಕ |

**ಹೆಚ್ಚಿನ ಮಾಹಿತಿಗಾಗಿ**

ಶ್ರೀ ಕರುಣ್ ರಾವ್ ಬೆಳ್ಳೆ ✆ : 73376 34359 | ಶ್ರೀ ಶ್ರೀಧರ ಶಾಸ್ತ್ರಿ ✆ : 99015 96467



## ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ
ವತಿಯಿಂದ
## ಶೃಂಗೇರಿ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಸನ್ಯಾಸ ಸ್ವೀಕಾರದ
### ಸುವರ್ಣ ವರ್ಷಾಚರಣೆ

# ಸುವರ್ಣ ಭಾರತೀ ಮಹೋತ್ಸವ, ನವಚಂಡಿ ಮಹಾಯಾಗ ಸಂಪನ್ನ



ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಮಂಗಳೂರು ಹಾಗೂ ಎಲ್ಲ ಸ್ಥಾನಿಕ ಬ್ರಾಹ್ಮಣ ಸಂಘಗಳ ಸಹಕಾರದೊಂದಿಗೆ ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಶ್ರೀಮಜ್ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಯವರ ಸನ್ಯಾಸ ಸ್ವೀಕಾರದ ಸುವರ್ಣ ವರ್ಷಾಚರಣೆ ಅಂಗವಾಗಿ ಕುಂಜಿಬೆಟ್ಟು 'ಶಾರದಾ ಮಂಟಪ'ದಲ್ಲಿ ಸುವರ್ಣ ಭಾರತೀ ಮಹೋತ್ಸವ, ನವಚಂಡಿ ಮಹಾಯಾಗ, ಸ್ತೋತ್ರ ತ್ರಿವೇಣಿ ಸಮರ್ಪಣಾ ಕಾರ್ಯಕ್ರಮವು ಶನಿವಾರ ನೆರವೇರಿತು.

ನವಚಂಡಿ ಮಹಾಯಾಗದ ಪೂರ್ಣಾಹುತಿ ಸ್ತೋತ್ರ ಸಮರ್ಪಣೆ, ಋತ್ವಿಜರಿಂದ ವೇದಘೋಷ, ಸ್ಥಾನಿಕ ಬ್ರಾಹ್ಮಣ ಮಹಾಮಂಡಲದ ವತಿಯಿಂದ ಹಾಗೂ ಎಲ್ಲ ಸಂಘಗಳ ಸಮಾಜ ಬಾಂಧವರಿಂದ ಫಲ ಸಮರ್ಪಣೆ. ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಯವರ ಶಿಷ್ಯರಾದ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಯವರಿಂದ ಆಶೀರ್ವಚನ, ಅನುಗ್ರಹ ಮಂತ್ರಾಕ್ಷತೆ, ಅನ್ನಸಂತರ್ಪಣೆ ನಡೆಯಿತು.

ಇದೇ ವೇಳೆ ಮಹಾಮಂಡಲ ಸಹಿತ ಎಲ್ಲ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳನ್ನು ಮತ್ತು ಸ್ತೋತ್ರ ತ್ರಿವೇಣಿ ಸಮರ್ಪಣಾ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಡಾ। ವಿದ್ಯಾ ಸುದರ್ಶನ ರಾವ್ ಅವರನ್ನು ಸ್ವಾಮೀಜಿ ಗೌರವಿಸಿದರು.

ಸ್ಥಾನಿಕ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಮಂಜುನಾಥ ಹೆಬ್ಬಾರ್ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು. ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಡಾ। ಎ. ಪಿ. ಕೃಷ್ಣ ಇವರನ್ನು ಗುರುಗಳ ಸಮ್ಮುಖದಲ್ಲಿ ಗೌರವಿಸಲಾಯಿತು.

Prop: Somashekhar
Mob: 9844551244
WONDER CREATION
Decor & Event planners
Our Services :-
❖ Corporate Events
❖ All Types Of Stage Decoration
❖ Sounds And Lights
❖ Led Wall Rentals
❖ Selfie Booth Concept
❖ Shamiyana/Tint Sheet/Plat Form Chairs/Round Table etc....
❖ Photography & Videography
2T-145-3A, Kulai Gudde Road, Kulai, Surathkal

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)



Freelance Makeup & Hairstyle Artistry
Swapna_rao_makeoverartistry
BRIDAL / PRE / POST WEDDING FUNCTIONS / OTHER PERSONAL EVENTS & PARTIES
Rental Jewellery / Saree Pre-pleating Service available
For Bookings and Enquiries
Swapna Vallish : 9972465209 / 7892235761

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

# ದೇವಳಕ್ಕೆ ನಿಧಿ ಸಮರ್ಪಣೆ

ಶ್ರೀ ಜಯದುರ್ಗಾಪರಮೇಶ್ವರೀ ದೇವಸ್ಥಾನ ಬ್ರಹ್ಮಕಲಶೋತ್ಸವ ಸಮಾರಂಭದ ಸಂದರ್ಭದಲ್ಲಿ ಕಡಬದಲ್ಲಿ ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ಪದಾಧಿಕಾರಿಗಳು ಶ್ರೀ ಸಭಾದ ಸದಸ್ಯರಿಂದ ಸಂಗ್ರಹಿಸಿದ ದೇಣಿಗೆಯನ್ನು ಶ್ರೀ ಅರುಣಕುಮಾರ್ ಜಡೆಮನೆ ಇವರಿಗೆ ಹಸ್ತಾಂತರಿಸಲಾಯಿತು.








Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri


*Publisher :* Dr. A. P. Krishna, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3
*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.